ಕನ್ನಡ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಹೆಗಲೆಣೆಯಾದುದು ಎಂದು ಹೆಮ್ಮೆಯಿಂದ ಹೇಳುವಾಗ ನಮ್ಮ ದೃಷ್ಟಿಯಲ್ಲಿರುವುದು ಕಥೆ, ಕವಿತೆ, ಕಾದಂಬರಿ, ಕಾವ್ಯದಂಥ ಸೃಜನಶೀಲ ಪ್ರಕಾರಗಳಷ್ಟೇ. ಇತರ ಜ್ಞಾನಶಿಸ್ತುಗಳ ಕುರಿತ ಬರವಣಿಗೆಯ ಬಗ್ಗೆ ಕನ್ನಡ ಸಮಾಜ ಯೋಚಿಸಿರುವುದು, ಮುನ್ನೆಲೆಯಲ್ಲಿ ಮೆರೆಸಿರುವುದು ಕಡಿಮೆ. ಇದಕ್ಕೆ ಅತ್ಯುತ್ತಮ ಉದಾಹರಣೆ, ವಿಜ್ಞಾನ ಸಾಹಿತ್ಯ ಪ್ರಕಾರ. ವಿಜ್ಞಾನ ಮತ್ತು ತಂತ್ರಜ್ಞಾನ ನಮ್ಮ ಬದುಕನ್ನು ಆವರಿಸಿಕೊಂಡಿದ್ದರೂ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚನೆ ಮಾತ್ರ ತೃಪ್ತಿಕರವಾಗಿಲ್ಲ. ಹಾಗೆಂದು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚನೆ ದೊಡ್ಡ ಪ್ರಮಾಣದಲ್ಲಿ ನಡೆದಿಲ್ಲ ಎಂದರ್ಥವಲ್ಲ. ವಿಜ್ಞಾನದ ಮಹತ್ವವನ್ನು ಮನಗಂಡ ಕೆಲವು ಲೇಖಕರು ವೈಯಕ್ತಿಕವಾಗಿ ಕೈಗೊಂಡ ಬರವಣಿಗೆಯ ಸಾಹಸ ಹಾಗೂ ಖಾಸಗಿ ಸಂಸ್ಥೆಗಳ ಉತ್ಸಾಹದಿಂದಾಗಿ ವಿಜ್ಞಾನ ವಿಶ್ವಕೋಶಗಳು, ವಿಜ್ಞಾನ ಚರಿತ್ರೆಯ ಸಂಪುಟಗಳು ಪ್ರಕಟಗೊಂಡಿವೆ. ಆದರೆ, ವಿಜ್ಞಾನ ಸಾಹಿತ್ಯ ಕನ್ನಡ ಓದುಗರ ಭಾವಕೋಶದ ಭಾಗವಾಗಿರುವುದು, ಹೆಮ್ಮೆಯ ಅಭಿವ್ಯಕ್ತಿಯಾಗಿರುವುದು ಅಪರೂಪ. ಕಥೆ–ಕವಿತೆ ರಚಿಸುವ ಬರಹಗಾರರಿಗೆ ದೊರಕುವ ಮನ್ನಣೆ ವಿಜ್ಞಾನದ ಲೇಖಕರಿಗೆ ದೊರೆಯುತ್ತಿಲ್ಲ. ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕನ್ನಡ ಸಾಂಸ್ಕೃತಿಕ ಇತಿಹಾಸದ ಅವಲೋಕನ ಸಾಮಾನ್ಯವಾಗಿ ನಡೆಯುತ್ತದೆ. ಆದರೆ, ಇಂದು ಅಗತ್ಯವಾಗಿ ನಡೆಯಬೇಕಾಗಿರುವುದು ವಿಜ್ಞಾನ ಸಾಹಿತ್ಯದ ಅವಲೋಕನ. ‘ಕನ್ನಡ ಮಾಸ’ದ ಸಂದರ್ಭದಲ್ಲಿನ ಈ ವಿಶೇಷ ಲೇಖನ, ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಡೆದುಬಂದ ದಾರಿಯ ಮೈಲಿಗಲ್ಲುಗಳನ್ನು ಗುರ್ತಿಸುವುದರ ಜೊತೆಗೆ, ಸಾಗಬೇಕಾಗಿರುವ ದಾರಿಯನ್ನೂ ಸೂಚಿಸುವಂತಿದೆ.

■ ಟಿ.ಆರ್. ಅನಂತರಾಮು

ಲೇಖಕರು ಕನ್ನಡದ ಪ್ರಖ್ಯಾತ ವಿಜ್ಞಾನ ಲೇಖಕರು ಹಾಗೂ ವಿಜ್ಞಾನ ಸಂಪುಟಗಳ ಸಂಪಾದಕ ಮಂಡಲಿಯಲ್ಲಿ ಕಾರ್ಯ ನಿರ್ವಹಿಸಿರುವವರು.